ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-7 Issue-4, January - February 2026, Pp. 19-26
©*IIMRD*, Mysuru

IIMRD JOURNALS
www.iimrd.com

# ಸಮಾಜ ರಕ್ಷಕರಾಗಿ ಕೋವಿಡ್–19 ವಾರಿಯರ್ಸ್

**ಶಶಿಕುಮಾರ್ ಸಿ.ಎಂ**
ಸಂಶೋಧಕರು, ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣ ಕೇಂದ್ರ, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು

**ಸಾರಾಂಶ: (Abstract)**

*ಕೋವಿಡ್–19 ಚೀನಾದಲ್ಲಿ ಹುಟ್ಟಿ ಜಗತ್ತಿಗೆ ಹರಡಿ ಅಪಾರ ಸಾವು–ನೋವುಗಳನ್ನುಂಟು ಮಾಡಿದೆ. ವೈರಸ್ ತಡೆಗಟ್ಟಲು ಇಡೀ ದೇಶವನ್ನೇ ಲಾಕ್‌ಡೌನ್ ಮಾಡಲಾಯಿತು. ಈ ಮಹಾಮಾರಿ ವೈರಸ್ ದೇಶದಾದ್ಯಂತ ಭಯ ಮತ್ತು ಅನಿಶ್ಚಿತತೆಯನ್ನು ಉಂಟು ಮಾಡಿದ ಸಮಯದಲ್ಲಿ ಸಮಾಜವನ್ನು ರಕ್ಷಿಸಲು ಅನೇಕ ಕೋವಿಡ್ ವೀರರು ತಮ್ಮ ಜೀವನವನ್ನು ಪಣಕಿಟ್ಟು ಸೇವೆ ಸಲ್ಲಿಸಿದ್ದಾರೆ. ಕೋವಿಡ್ ನಿಯಂತ್ರಿಸಲು ವೈದ್ಯರು, ಆರಕ್ಷಕರು, ಪೌರ ಕಾರ್ಮಿಕರು, ನರ್ಸ್‌ಗಳು, ಆಶಾಕಾರ್ಯಕರ್ತರು, ಮಾಧ್ಯಮದವರು, ಸರ್ಕಾರಿ ಸಿಬ್ಬಂದಿವರ್ಗದವರು ಹಗಲಿರುಳು ಶ್ರಮಿಸಿದ್ದಾರೆ. ಇವರ ನಿಸ್ವಾರ್ಥ ಸೇವೆಯನ್ನು ನೆನೆಯುವುದು ಅಗತ್ಯವಾಗಿದೆ. ಪ್ರಸ್ತುತ ಈ ಲೇಖನದಲ್ಲಿ ಕೋವಿಡ್–19 ನಿಯಂತ್ರಿಸಲು ವಾರಿಯರ್ಸ್‌ಗಳ ಸೇವೆಯ ಕುರಿತು ಅಧ್ಯಯನ ಮಾಡಲಾಗಿದೆ.*

**ಮುಖ್ಯಪದಗಳು (Keywords):** *ಕೋವಿಡ್–19, ವಾರಿಯರ್ಸ್, ಲಾಕ್‌ಡೌನ್, ಅಂಚೆಚೀಟಿ*

## ಪೀಠಿಕೆ

2019ರ ಅಂತ್ಯದಲ್ಲಿ ಚೀನಾದಿಂದ ಉಗಮವಾದ ಕೋವಿಡ್–19 ವೈರಸ್ ಅತ್ಯಂತ ವೇಗವಾಗಿ ಜಗತ್ತಿಗೆ ವ್ಯಾಪಿಸಿತು. ಕೋವಿಡ್ ಹರಡಿಕೆಯ ಭಾಗವಾಗಿ ಸೋಂಕು ಭಾರತಕ್ಕೂ ವಕ್ಕರಿಸಿ ಅನೇಕ ಸಾವು ನೋವುಗಳನ್ನು ಉಂಟುಮಾಡಿದೆ.ಕೋವಿಡ್–19 ವೈರಸ್ ಹರಡುವುದನ್ನು ತಡೆಯುವಲ್ಲಿ, ವೈರಸ್‌ನಿಂದ ಜನರಿಗೆ ರಕ್ಷಣೆ ಒದಗಿಸುವಲ್ಲಿ, ಸೋಂಕು ಬಂದಾಗ ಚಿಕಿತ್ಸೆ ಪಡೆಯುವಲ್ಲಿ ಕೋವಿಡ್ ವಾರಿಯರ್ಸ್‌ಗಳ ಪಾತ್ರ ಬಹುಮುಖ್ಯವಾಗಿದೆ. ಹೊಸ ವೈರಸ್ ಭಾರತಕ್ಕೆ ಬಂದಾಗ ಜನರಿಗೆ ಇದರ ಬಗ್ಗೆ ತಿಳಿದಿರಲಿಲ್ಲ. ಈ ವೈರಸ್ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಿ, ಕೋವಿಡ್ ತಡೆಗಟ್ಟುವುದು ಹೇಗೆ? ಬಂದರೆ ಚಿಕಿತ್ಸೆ ಪಡೆಯುವ ವಿಧಾನ ಮಾಸ್ಕ್, ಸ್ಯಾನಿಟೈಜರ್ ಬಳಸುವ ವಿಧಾನಗಳ ಬಗ್ಗೆ ವಾರಿಯರ್ಸ್‌ಗಳು ಅರಿವು ಮೂಡಿಸಿದ್ದಾರೆ.

ಕೋವಿಡ್ ವಾರಿಯರ್ಸ್‌ಗಳನ್ನು ಗುರುತಿಸುವುದಾದರೆ ಪ್ರಮುಖವಾಗಿ ವೈದ್ಯರು, ನರ್ಸ್‌ಗಳು (ದಾದಿಯರು), ಆಶಾಕಾರ್ಯಕರ್ತರು, ಆಂಬ್ಯುಲೆನ್ಸ್ ಚಾಲಕರು, ಪ್ರಯೋಗಾಲಯ ಸಿಬ್ಬಂದಿಗಳು, ನೈರ್ಮಲ್ಯ ಕಾರ್ಯಕರ್ತರು, ಪೊಲೀಸ್ ಸಿಬ್ಬಂದಿವರ್ಗ, ಪತ್ರಿಕಾ ವಿತರಕರು, ಮಾಧ್ಯಮದವರು ಇತರ ಮುಂಚೂಣಿ ಕಾರ್ಯಕರ್ತರು.

*Please cite this article as:* ಶಶಿಕುಮಾರ್, ಸಿ.ಎಂ. (2026). ಸಮಾಜ ರಕ್ಷಕರಾಗಿ ಕೋವಿಡ್–19 ವಾರಿಯರ್ಸ್. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 7(4). ಪು.ಸಂ.* 19–26

ಜನರು ಕೋವಿಡ್–19 ಸೋಂಕಿಗೆ ಒಳಗಾದಾಗ ತಮ್ಮ ಕುಟುಂಬದವರ ಜೊತೆ ಸೇರಲು ಸಾಧ್ಯವಾಗದಿದ್ದಾಗ ವೈರಸ್ ಸೋಂಕಿತರನ್ನು ಒಂಟಿಯಾಗಿ ಮಾಡಿತು.ಸೋಂಕಿತರ ಮಕ್ಕಳು ತಮ್ಮ ಪೋಷಕರಿಂದ ಬೇರ್ಪಟ್ಟರು.ಸೋಂಕಿತರು ಆಸ್ಪತ್ರೆಗಳಲ್ಲಿ ಏಕಾಂಗಿಯಾಗಿ ಸೋಂಕಿನ ವಿರುದ್ಧ ಹೋರಾಡಬೇಕಾಯಿತು. ಈ ಹೋರಾಟದಲ್ಲಿ ಸೋತ ಮೃತ ಸಂಬಂಧಿಕರಿಗೆ ಸರಿಯಾದ ವಿಧಿ ವಿಧಾನ ಕಾರ್ಯ ನೆರವೇರಿಸಲು ಸಹ ಸಾಧ್ಯವಾಗಲಿಲ್ಲ. ಇಂತಹ ಕಠಿಣ ದಿನಗಳಲ್ಲಿ ಕೋವಿಡ್ ವಾರಿಯರ್ಸ್ ದೇಶದ ಜನತೆಯನ್ನು ಉಳಿಸಲು ತಮ್ಮ ಪ್ರಾಣವನ್ನೇ ಪಣಕಿಟ್ಟು ನಿಸ್ವಾರ್ಥ ಸೇವೆಯನ್ನು ಸಲ್ಲಿಸಿರುತ್ತಾರೆ.

**ಕೋವಿಡ್ ವಾರಿಯರ್ಸ್‌ಯಾಗಿ ವೈದ್ಯರು**

ಕೋವಿಡ್–19 ಸೋಂಕಿಗೆ ಒಳಗಾಗಿರುವ ಜನರಿಗೆ ವೈದ್ಯರು ಯೋಧರ ರೂಪದಲ್ಲಿ ನಿಂತು ರಕ್ಷಕರಾಗಿ ಕೆಲಸ ನಿರ್ವಹಿಸಿದ್ದಾರೆ. ದೇಶದ ಗಡಿ ಭಾಗದಲ್ಲಿ ಯೋಧರು ಕಣ್ಣಿಗೆ ಕಾಣುವ ಶತ್ರು ವೈರಿಗಳ ವಿರುದ್ಧ ಹೋರಾಟ ಮಾಡಿದರೆ, ವೈದ್ಯರು ಕಣ್ಣಿಗೆ ಕಾಣದ ಕೋವಿಡ್ ವೈರಸ್ ವಿರುದ್ಧ ಜನತೆಯನ್ನು ರಕ್ಷಿಸಲು ಹೋರಾಡಿದ್ದಾರೆ. ವೈದ್ಯರು ವ್ಯಾಸಂಗ ಮುಗಿಸಿ, ವೈದ್ಯ ಸೇವೆಗೆ ಸೇರುವಾಗ **"**ಮಾನವ ಜೀವ ರಕ್ಷಿಸುತ್ತೇವೆ**"** ಎಂದು ಪ್ರಮಾಣ ಮಾಡಿರುತ್ತಾರೆ. ಆ ನಿಟ್ಟಿನಲ್ಲಿ ವೈರಸ್ ವಕ್ಕರಿಸಿದಾಗ ವೈದ್ಯಲೋಕ ಪ್ರಾಮಾಣಿಕವಾಗಿ ತಮ್ಮ ಸೇವೆಯನ್ನು ಸಲ್ಲಿಸಿರುತ್ತಾರೆ. ಕೋವಿಡ್ ವೈರಸ್ ಒಬ್ಬರಿಂದ ಮತ್ತೊಬ್ಬರಿಗೆ ಹರಡುತ್ತದೆ. ಸೋಂಕಿತರನ್ನು ಪರೀಕ್ಷಿಸುವಾಗ ವೈದ್ಯರಿಗೆ ಸೋಂಕು ತಗಲುವ ಸಂದರ್ಭಗಳಿರುತ್ತವೆ. ಜಗತ್ತಿನಾದ್ಯಾಂತ ಅನೇಕ ವೈದ್ಯರು ಸೋಂಕಿತರನ್ನು ಹಾರೈಕೆ ಮಾಡುವ ಸಂದರ್ಭದಲ್ಲಿ ಸೋಂಕಿಗೆ ಒಳಗಾಗಿ ಸಾವನ್ನಪ್ಪಿದ್ದಾರೆ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲೂ ಸೋಂಕಿತರನ್ನು ಪರೀಕ್ಷಿಸಿ ಸೋಂಕನ್ನು ಗುಣಪಡಿಸುವ ವೈದ್ಯರಿಗೆ ಸಲ್ಯೂಟ್ ಹೊಡೆಯಲೇಬೇಕು.

ಭೂಮಿಯ ಮೇಲೆ ಮನುಷ್ಯನು ದೇವರನ್ನು ಅತಿಯಾಗಿ ನಂಬಿದ್ದಾನೆ. ಪ್ರಾಣ ಹೋಗುವಾಗ ಮತ್ತು ಸಂಕಷ್ಟ ಕಾಲದಲ್ಲಿ ಮನುಷ್ಯ ದೇವರನ್ನು ಪ್ರಾರ್ಥಿಸುತ್ತಾನೆ. ದೇವರು ಮನುಷ್ಯನನ್ನು ರಕ್ಷಿಸಿದ್ದಿಯೋ? ಇಲ್ಲವೋ? ಆದರೆ ವೈದ್ಯರೆಂಬ ದೇವರು ಮನುಷ್ಯನ ಜೀವ ಉಳಿಸಿ ಸಾವಿನ ದವಡೆಯಿಂದ ಪಾರು ಮಾಡಿರುತ್ತಾರೆ. ಹೀಗಾಗಿ ಕರೋನಾ ಸಂದರ್ಭದಲ್ಲಿ ಮನುಷ್ಯನ ಜೀವ ಉಳಿಸಲು ತನ್ನ ಪ್ರಾಣ ಪಣಕಿಟ್ಟು ಹೋರಾಡುತ್ತಿರುವ ವೈದ್ಯರು ಮಾನವೀಯತೆ ಮೆರವ ನಿಜವಾದ ದೇವರುಗಳಾಗಿದ್ದಾರೆ. ಮಾನವನು ತಮ್ಮ ಕಷ್ಟ ನೋವುಗಳನ್ನು ಪರಿಹರಿಸಲು ದೇವರಿಂದ ಸಾಧ್ಯ ಎಂದು ನಂಬಿದ್ದಾರೆ. ಆರೋಗ್ಯ ಸಮಸ್ಯೆ ಬಂದಾಗಲು ದೇವರನ್ನು ಪ್ರಾರ್ಥಿಸುವುದು, ಹರಕೆ ಹೊರುವುದು ಮಾಡುತ್ತಾರೆ. ಕೋವಿಡ್ ಬಂದ ಸಂದರ್ಭದಲ್ಲೂ ಸಹ ಸೋಂಕು ಹೋಗಲಾಡಿಸಲು ಊರಿನ ಮಾರಿ ದೇವರನ್ನು ಪೂಜಿಸಿರುವುದುಂಟು. ಆದರೆ ಕೋವಿಡ್–19 ಸಂದರ್ಭದಲ್ಲಿ ರೋಗಿಯಿಂದ ತನಗೂ ವೈರಸ್ ಸೋಂಕು ಬರುತ್ತದೆ ಎಂದು ಗೊತ್ತಿದ್ದರೂ ತಮ್ಮ ಅವಲಂಭಿತರಾದ ತಂದೆ–ತಾಯಿ, ಮಕ್ಕಳನ್ನು ಲೆಕ್ಕಿಸದೇ, ಜೀವದ ಹಂಗು ತೊರೆದು ಕೋವಿಡ್ ಹೋಗಲಾಡಿಸಲು ಶ್ರಮಿಸಿದ್ದಾರೆ.ವೈದ್ಯರು ಸೋಂಕು ತಗುಲಿದ ವ್ಯಕ್ತಿಯನ್ನು ಚಿಕಿತ್ಸೆ ಮಾಡುವ ಸಂದರ್ಭದಲ್ಲಿ ಸೋಂಕು ತಮಗೆ ತಗುಲದ ಹಾಗೆ ಮುಂಜಾಗ್ರತಕ್ರಮವಾಗಿ ಮಾಸ್ಕ್, ಪಿಪಿಇ ಕಿಟ್ ಅನ್ನು ಒಮ್ಮೆ ಧರಿಸಿದರೆ ಅವರ ಆ ದಿನದ ಅವಧಿ ಮುಗಿಯುವವರೆಗೆ ಸರಿಯಾಗಿ ಊಟ, ನೀರನ್ನು ಕುಡಿಯದೆ

ತಮ್ಮ ಕರ್ತವ್ಯವನ್ನು ನಿರ್ವಹಿಸಿದ್ದಾರೆ. ಕೋವಿಡ್ ಸೋಂಕಿತರನ್ನು ರಕ್ಷಿಸುವುದರ ಜೊತೆಗೆ ತಮ್ಮನು ತಾನು ರಕ್ಷಿಸಿಕೊಳ್ಳುವ ಜವಾಬ್ದಾರಿ ವೈದ್ಯರುಗಳದ್ದಾಗಿತ್ತು. ವೈದ್ಯರು ತಮ್ಮ ಕೆಲಸ ಮುಗಿಸಿ ಮನೆಗೆ ಹೋದಾಗ ತನ್ನ ಗಂಡ, ಹೆಂಡತಿ, ಮಕ್ಕಳು, ಕುಟುಂಬದ ಸದಸ್ಯರೊಟ್ಟಿಗೆ ಸೇರುವಾಗಿರಲಿಲ್ಲ. ಎಲ್ಲಿ ಸೋಂಕು ತಮ್ಮ ಕುಟುಂಬದ ಸದಸ್ಯರಿಗೆ ಬಂದುಬಿಡುತ್ತದೆಯೋ?ಎಂಬ ಭಯದಲ್ಲಿಯೇ ತಮ್ಮ ಜೀವನದ ದಿನಗಳನ್ನು ಕಳೆದಿದ್ದಾರೆ.ದೇಶದಲ್ಲಿ ಸೋಂಕಿನ ಪ್ರಕರಣಗಳು ಹೆಚ್ಚಾದ್ದರಿಂದ ರಜಾ ದಿನಗಳಲ್ಲೂ ಸೇವೆ ಮಾಡಲು ಸರ್ಕಾರವು ಸೂಚಿಸಿತು.ಆದ್ದರಿಂದ ರಜಾ ದಿನಗಳನ್ನು ಲೆಕ್ಕಿಸದೇ ಸೇವೆ ಸಲ್ಲಿಸಿದ್ದಾರೆ. ಕೋವಿಡ್ ರೋಗಿಗೆ ಚಿಕಿತ್ಸೆ ನೀಡಿದಾಗ ತಮ್ಮ ಕುಟುಂಬದಿಂದ ದೂರ ಉಳಿದು 14 ದಿನ ಕ್ವಾರಂಟೈನ್‌ನಲ್ಲಿದ್ದರು, ಕೋವಿಡ್ ಸಂದರ್ಭದಲ್ಲಿ ವೈದ್ಯರುಗಳು ಸರಿಯಾಗಿ ತಮ್ಮ ಮನೆಗಳಿಗೆ ಹೋಗುತ್ತಿರಲಿಲ್ಲ. ಕುಟುಂಬದ ಸದಸ್ಯರುಗಳ ಜೊತೆ ಬರೀ ಫೋನಿನಲ್ಲಿ ಮಾತನಾಡುತ್ತಿದ್ದರು. ಮನೆಯಲ್ಲಿ ಚಿಕ್ಕ ವಯಸ್ಸಿನ ಮಕ್ಕಳು, ವಯಸ್ಸಾದ ತಂದೆ–ತಾಯಿ ಇರುತ್ತಾರೆ ಅವರಿಗೆ ಎಲ್ಲಿ ಕೋವಿಡ್ ಬಂದುಬಿಡುತ್ತದೆ ಎಂಬ ಭಯ ಅವರನ್ನು ಕಾಡಿದೆ. ಇಂತಹ ಪರಿಸ್ಥಿತಿಯಲ್ಲೂ ವೈದ್ಯರು ಕೋವಿಡ್ ವೈರಸ್ ಹೋಗಲಾಡಿಸಲು ಹಗಲು ರಾತ್ರಿ ಶ್ರಮಿಸಿದ್ದಾರೆ.

**ಕೋವಿಡ್ ವಾರಿಯರ್ಸ್‌ಗಳಾಗಿ ನರ್ಸ್/ದಾದಿಯರು**

ಕೋವಿಡ್–19 ಹೋಗಲಾಡಿಸುವಲ್ಲಿ ವೈದ್ಯರಷ್ಟೆ ಪಾತ್ರ ನರ್ಸ್‌ಗಳದಿದೆ. ಸೋಂಕಿಗೆ ಒಳಗಾದ ರೋಗಿಯ ಆರೈಕೆಯನ್ನು ನರ್ಸ್‌ಗಳು ಮಾಡುತ್ತಿದ್ದರು. ಹಿಂದಿನ ಕಾಲಘಟ್ಟದಲ್ಲಿ ಹೆರಿಗೆ ಮಾಡಿಸುವವರನ್ನು ಸೂಲಗಿತ್ತಿಯೆಂದು ಕರೆಯಲಾಗಿತ್ತು. ಈಗಿನ ಕಾಲದಲ್ಲಿ ಸೂಲಗಿತ್ತಿಯರ ಕೆಲಸವನ್ನು ಆಸ್ಪತ್ರೆಯ ನರ್ಸ್‌ಗಳು ನಿರ್ವಹಿಸುತ್ತಾರೆ. ವೈದ್ಯರು ರೋಗಿಯ ಚಿಕಿತ್ಸೆಯ ಮಾರ್ಗದರ್ಶನವನ್ನು ನೀಡುತ್ತಾರೆ.ಅದಕ್ಕೆ ಅನುಗುಣವಾಗಿನರ್ಸ್‌ಗಳು ರೋಗಿಯ ಗುಣವಾಗುವವರೆಗೂ ಅವರ ಹಾರೈಕೆ ಮಾಡುತ್ತಾರೆ. ಕೋವಿಡ್ ಚಿಕಿತ್ಸೆಯಲ್ಲಿ ನರ್ಸ್‌ಗಳು ಕೂಡ ಮಾಸ್ಕ್, ಪಿಪಿಇ ಕಿಟ್ ಧರಿಸಿ ಊಟ, ನೀರನ್ನು ಕುಡಿಯದೇ ಕೆಲಸ ನಿರ್ವಹಿಸಿದ್ದಾರೆ. ವೈದ್ಯನಂತೆ ನರ್ಸ್‌ಗಳು ಕೂಡ ತಮ್ಮ ಪತಿ, ಪತ್ನಿ, ಮಕ್ಕಳು, ತಂದೆ ತಾಯಿಯಿಂದ ಕೆಲವು ವಾರಾನುಗಟ್ಟಲೇ ದೂರ ಇದ್ದು, ಕೋವಿಡ್ ರೋಗಿಗಳ ಆರೈಕೆಯನ್ನು ಮಾಡಿದ್ದಾರೆ. ನರ್ಸ್ ಕೆಲಸ ಮಾಡುವವರಲ್ಲಿ ಬಹುಪಾಲು ಮಹಿಳೆಯರೇ ಇರುತ್ತಾರೆ. ಅದರಲ್ಲಿ ಕೆಲವರಿಗೆ ಈಗ ತಾನೇ ಹೊಸದಾಗಿ ಮದುವೆಯಾಗಿ ಹೊಸ ಜೀವನ ಪ್ರಾರಂಭಿಸಿದವರು, ಮತ್ತೆ ಕೆಲವರಿಗೆ ಚಿಕ್ಕ ವಯಸ್ಸಿನ ಮಕ್ಕಳು ಇರುತ್ತಾರೆ, ಮತ್ತೆ ಕೆಲವರಿಗೆ ವಯಸ್ಸಾದ ತಂದೆ–ತಾಯಿ ನೋಡಿಕೊಳ್ಳುವ ಜವಾಬ್ದಾರಿ ಇರುತ್ತದೆ. ಈ ನಡುವೆ ಕೋವಿಡ್ ವೈರಸ್ ತೊಲಗಿಸುವ ಹೋರಾಟದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡರು. ಕೋವಿಡ್ ಸೋಂಕಿತರನ್ನು ಗುಣಪಡಿಸುವಲ್ಲಿ ವೈದ್ಯರ ಜೊತೆ ಸೇರಿ ಹಗಲಿರುಳು ಶ್ರಮಿಸಿದ್ದಾರೆ. ಕೋವಿಡ್ ಹರಡುವುದನ್ನು ತಡೆಗಟ್ಟಲು ಸಾಮಾಜಿಕ ಅಂತರ ಬಹಳ ಮುಖ್ಯ. ಆದರೆ ಎಲ್ಲಾ ಸಂದರ್ಭದಲ್ಲಿ ಅಂದರೆ ಸೋಂಕಿತರ ಚಿಕಿತ್ಸೆ, ಉಪಚಾರದ ವಿಷಯದಲ್ಲಿ ಆರೋಗ್ಯ ಸಿಬ್ಬಂದಿ ಅಂತರ ಕಾಯ್ದುಕೊಳ್ಳಲು ಸಾಧ್ಯವಾಗದಿರುವುದರಿಂದ ವೈದ್ಯಕೀಯ ಸಿಬ್ಬಂದಿಯೇ ಕೋವಿಡ್ ಸೋಂಕಿಗೆ ಒಳಗಾಗಿ ಸಾವನ್ನಪ್ಪಿರುವ ಸಂದರ್ಭಗಳುಂಟು. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಕುಟುಂಬದಿಂದ ಜೀವ ಉಳಿದರೆ ಸಾಕು, ವೃತ್ತಿಯೇ ಬೇಡ, ಬಿಟ್ಟುಬಿಡುವಂತೆ ಒತ್ತಡಗಳು ಬಂದಿರುವುದುಂಟು. ಈ ಒತ್ತಡಗಳನ್ನು ಮೀರಿ ನರ್ಸ್‌ಗಳು

ಕೋವಿಡ್ ವಿರುದ್ಧ ಯೋಧರಂತೆ ಹೋರಾಡಿದ್ದಾರೆ. ಎರಡರಿಂದ ಮೂರು ತಿಂಗಳು ಕಾಲ ತಮ್ಮ ಕುಟುಂಬದಿಂದ ದೂರ ಇದ್ದುಕೊಂಡು ಆಸ್ಪತ್ರೆಗಳಲ್ಲಿ, ಕೋವಿಡ್ ಆರೈಕೆ ಕೇಂದ್ರಗಳಲ್ಲಿ ಸೋಂಕಿತರನ್ನು ಆರೈಕೆ ಮಾಡಿರುತ್ತಾರೆ.

**ಕೋವಿಡ್ ವಾರಿಯರ್ಸ್‌ಗಳಾಗಿ ಆಶಾಕಾರ್ಯಕರ್ತೆಯರು**

ಕೋವಿಡ್ ಸೋಂಕು ತಡೆಗಟ್ಟುವಲ್ಲಿ ಆಶಾಕಾರ್ಯಕರ್ತೆರ ಪಾತ್ರ ಬಹಳ ಮುಖ್ಯವಾಗಿದೆ. ಸಮುದಾಯ ಮತ್ತು ಆರೋಗ್ಯ ವ್ಯವಸ್ಥೆಯ ನಡುವೆ ಕಾರ್ಯನಿರ್ವಹಿಸುವ ದೃಷ್ಟಿಯಿಂದ ಆಶಾಕಾರ್ಯಕರ್ತೆಯರನ್ನು ಸಮುದಾಯದಿಂದ ಗುರುತಿಸಿ ಆಯ್ಕೆ ಮಾಡಲಾಗುತ್ತದೆ. ಈಕೆಯು ಆರೋಗ್ಯ ಸೇವಗಳ ಸೇವಾ ಪೂರೈಕೆದಾರಳಾಗಿಯೂ ಆರೋಗ್ಯ ವ್ಯವಸ್ಥೆಯನ್ನು ಸುಧಾರಿಸಲು ಸಮುದಾಯದ ಸಹಭಾಗಿತ್ವಕ್ಕೆ ಸಂಘಟಕಳಾಗಿಯೂ ಕಾರ್ಯನಿರ್ವಹಿಸುತ್ತಾರೆ. ಗ್ರಾಮೀಣ ಪ್ರದೇಶದಲ್ಲಿ 1000 ಮತ್ತು ನಗರ ಪ್ರದೇಶದ ಕೊಳಗೇರಿ ಮತ್ತು ಹಿಂದುಳಿದ ಪ್ರದೇಶಗಳಲ್ಲಿ 2500 ಜನಸಂಖ್ಯೆಗೆ ಒಬ್ಬರಂತೆ ಆಶಾಕಾರ್ಯಕರ್ತೆಯರನ್ನು ನೇಮಿಸಲಾಗುತ್ತದೆ. ಇವರು ಕೋವಿಡ್–19 ಸೋಂಕಿನ ಸಂದರ್ಭಗಳಲ್ಲಿ ತಮ್ಮ ಜೀವದ ಹಂಗುತೊರೆದು ಕಾರ್ಯನಿರ್ವಹಿಸಿದ್ದಾರೆ. ಕೋವಿಡ್ ಸಾಂಕ್ರಾಮಿಕದ ಸಂಕಷ್ಟ ಕಾಲದಲ್ಲಿ ಮನೆ–ಮನೆಗೆ ತೆರಳಿ ಸೋಂಕಿತರನ್ನು ಪತ್ತೆಹಚ್ಚಿ ಚಿಕಿತ್ಸೆ ದೊರೆಯುವಂತೆ ಮಾಡಿದ್ದಾರೆ. 'ಆಶಾ' ಎಂದರೆ ಹಿಂದಿಯಲ್ಲಿ ಭರವಸೆ ಎಂದರ್ಥ. ಈ ಪದಕ್ಕೆ ಅರ್ಥ ಬರುವ ಹಾಗೆ ಕೋವಿಡ್ ತುರ್ತು ಪರಿಸ್ಥಿತಿಯಲ್ಲಿ ಆಶಾ ಕಾರ್ಯಕರ್ತೆಯರು ತಮ್ಮ ಕುಟುಂಬವನ್ನು ಲೆಕ್ಕಿಸದೆ, ಗಡಿ ಕಾಯುವ ಯೋಧರ ರೀತಿಯಲ್ಲಿ ತಮ್ಮ ವ್ಯಾಪ್ತಿಗೆ ಒಳಪಡುವ ಪ್ರದೇಶವನ್ನು ಕೋವಿಡ್ ಮುಕ್ತಗೊಳಿಸಲು ಹಗಲಿರಲು ಶ್ರಮಿಸಿದ್ದಾರೆ.

ಕೋವಿಡ್ ಸಾಂಕ್ರಾಮಿಕ ಸಮಯದಲ್ಲಿ ಇವರು ಸಮುದಾಯ ಮತ್ತು ರಾಜ್ಯ ಆರೋಗ್ಯ ಸೇವೆಯನ್ನು ಒದಗಿಸುವ ಕೊಂಡಿಯಾಗಿ ಸೇವೆ ಸಲ್ಲಿಸಿದ್ದಾರೆ. ದೇಶದಾದ್ಯಂತ 2020ರ ಮಾರ್ಚ್ ತಿಂಗಳಲ್ಲಿ ಲಾಕ್‌ಡೌನ್ ವಿಧಿಸಿದರ ಪರಿಣಾಮವಾಗಿ ಕೆಲಸ ಅರಸಿ ನಗರ ಪ್ರದೇಶಗಳಿಗೆ ಹೋಗಿದವರು ಮರಳಿ ತಮ್ಮ ಊರುಗಳಿಗೆ ಹಿಂದಿರುಗಿದಾಗ ಅವರಿಂದ ಕೋವಿಡ್ ಹರಡುವ ಪ್ರಮಾಣ ಹೆಚ್ಚಿರುವುದರಿಂದ ಹಿಂದಿರುಗಿದವರನ್ನು ಪತ್ತೆಹಚ್ಚಿ ಕ್ವಾರಂಟೈನ್ ಮಾಡಿದ್ದಾರೆ. ಕ್ವಾರಂಟೈನ್ ಮಾಡಿದ ವ್ಯಕ್ತಿಯು ಶಿಷ್ಟಾಚಾರಗಳ ನಿಯಮಗಳನ್ನು ಸರಿಯಾಗಿ ಅನುಸರಿಸುತ್ತಿದ್ದಾರೆಯೇ ಎಂದು ಖಚಿತಪಡಿಸಿಕೊಳ್ಳುವ ಜವಾಬ್ದಾರಿ ಇವರದಾಗಿತ್ತು. ಪ್ರತಿದಿನವೂ ಮನೆ ಮನೆಗೆ ಹೋಗಿ ಸೋಂಕಿತರ ವಿವರಗಳನ್ನು ಸಂಗ್ರಹಿಸಿ ಆರೋಗ್ಯ ಇಲಾಖೆಗೆ ಮಾಹಿತಿಯನ್ನು ನೀಡುತ್ತಿದ್ದರು. ಸಮುದಾಯದ ಜನರಿಗೆ ಕೋವಿಡ್–19 ಕುರಿತು ಜಾಗೃತಿ ಮೂಡಿಸುತ್ತಿದ್ದರು.

**ಕೋವಿಡ್–19 ವಾರಿಯರ್ಸ್‌ಗಳಾಗಿ ಪೊಲೀಸರು**

ಕೋವಿಡ್–19 ಮಹಾಮಾರಿಯ ಸೋಂಕನ್ನು ತಡೆಗಟ್ಟುವ ನೆಲೆಯಲ್ಲಿ ಪೊಲೀಸರು ತಮ್ಮ ಜವಾಬ್ದಾರಿಯನ್ನು ನಿರ್ವಹಿಸಿದ್ದಾರೆ. ದೇಶದಲ್ಲಿ ಕೋವಿಡ್ ನಿಯಂತ್ರಿಸಲು ಸಂಪೂರ್ಣ ಲಾಕ್‌ಡೌನ್ ಅನ್ನು ಜಾರಿಗೊಳಿಸಿದಾಗ ಪೊಲೀಸರು ತಮ್ಮ ಪ್ರಾಣವನ್ನು ಪಣಕಿಟ್ಟು ಕೆಲಸ ನಿರ್ವಹಿಸಿದ್ದಾರೆ. ಲಾಕ್‌ಡೌನ್‌ನ್ನು ಸರಿಯಾಗಿ ಅನುಷ್ಠಾನಗೊಳಿಸುವಲ್ಲಿ ಪೊಲೀಸರ ಪಾತ್ರ ನಿಜಕ್ಕೂ ಶ್ಲಾಘನೀಯ. ಲಾಕ್‌ಡೌನ್ ಜಾರಿ ಮಾಡಿದ್ದಾಗ ಜನರು ಕೋವಿಡ್ ಬಗ್ಗೆ ಅರಿವಿಲ್ಲದೆ ಬೀದಿಗಿಳಿದರು. ಇವರನ್ನು ನಿಯಂತ್ರಿಸಲು ಪೊಲೀಸರು

ಶ್ರಮವಹಿಸಿದ್ದಾರೆ. ಕೋವಿಡ್ ಸಮಯದಲ್ಲಿ ಪೊಲೀಸರು ವೈರಸ್ ಸೋಂಕಿತರನ್ನು ಪತ್ತೆ ಮಾಡುವುದು, ಸೋಂಕಿತರ ಮೇಲೆ ನಿಗಾ ಇರಿಸುವುದು, ಕೋವಿಡ್ ಪೀಡಿತರಿಗೆ ಚಿಕಿತ್ಸೆ ನೀಡುತ್ತಿರುವ ಆಸ್ಪತ್ರೆಗಳಿಗೆ ಭದ್ರತೆ ಒದಗಿಸುತ್ತಿದ್ದರು. ಕೆಲಸ ಸಂದರ್ಭಗಳಲ್ಲಿ ಸೋಂಕಿತರು ಚಿಕಿತ್ಸೆ ಪಡೆಯಲು ನಿರಾಕರಿಸಿ ಪರಾರಿಯಾಗಿದ್ದಾಗ ಅವರನ್ನು ಪತ್ತೆಹಚ್ಚಿ ಅವರಿಂದ ಬೇರೆಯವರಿಗೆ ಸೋಂಕು ತಗುಲದ ಹಾಗೆ ಕಾರ್ಯನಿರ್ವಹಿಸಿದ್ದಾರೆ. ಸೋಂಕಿತರನ್ನು ಆಸ್ಪತ್ರೆಗಳಿಗೆ ತಲುಪಿಸಿದ್ದಾರೆ. ಲಾಕ್‌ಡೌನ್ ನಿರ್ವಹಣ್ಯ ಸಮಯದಲ್ಲಿ ಪೊಲೀಸರಿಗೂ ಸಹ ಕೋವಿಡ್ ತಗುಲುವ ಅಪಾಯ ಇದ್ದರು, ತಮ್ಮ ಅವಲಂಬಿತ ಕುಟುಂಬ ವರ್ಗದವರನ್ನು ಲೆಕ್ಕಿಸದೆ ಕೋವಿಡ್ ನಿಯಂತ್ರಿಸಲು ಹಗಲು–ರಾತ್ರಿಯನ್ನದೆ ತಮ್ಮ ಕರ್ತವ್ಯ ಮಾಡಿದ್ದಾರೆ.

**ಕೋವಿಡ್ ವಾರಿಯರ್ಸ್‌ಗಳಾಗಿ ಪೌರಕಾರ್ಮಿಕರು/ನೈರ್ಮಲ್ಯ ಕಾರ್ಯಕರ್ತರು**

ಕೋವಿಡ್–19 ಸಮಯದಲ್ಲಿ ಪೌರಕಾರ್ಮಿಕರು ತಮ್ಮ ಪ್ರಾಣವನ್ನು ಲೆಕ್ಕಿಸದೇ ಸಮಾಜದ ಆರೋಗ್ಯವನ್ನು ರಕ್ಷಿಸುವ ಸಲುವಾಗಿ ಪ್ರತಿನಿತ್ಯವೂ ನಿಷ್ಠೆಯಿಂದ ಕಾರ್ಯನಿರ್ವಹಿಸಿ ಕೋವಿಡ್ ನಿರ್ಮೂಲನೆಗಾಗಿ ಕೊಡುಗೆಯನ್ನು ನೀಡಿದ್ದಾರೆ. ಪೌರಕಾರ್ಮಿಕರ ಜೀವನ ಅತ್ಯಂತ ಕೆಳಮಟ್ಟದಲ್ಲಿರುತ್ತದೆ. ಬಡತನ ಇವರ ಬದುಕಿನ ಜೊತೆ ಜೊತೆಗೆ ಹೆಣೆದುಕೊಂಡಿರುತ್ತದೆ. ಎಷ್ಟೇ ಹಣ ಕೊಟ್ಟರು ಯಾರು ಮಾಡದ ಕೆಲಸವನ್ನು ಪೌರಕಾರ್ಮಿಕರು ಶ್ರದ್ಧೆಯಿಂದ ಮಾಡುತ್ತಾರೆ. ಶೌಚಾಲಯದ ಗುಂಡಿ, ಚರಂಡಿಗೆ ಇಳಿದು ಕೆಲಸ ಮಾಡುವುದು ಅತ್ಯಂತ ಅಮಾನವೀಯ ಆದರೂ, ಸಮಾಜದ ಹಿತದೃಷ್ಟಿಯಿಂದ ಎಲ್ಲರ ಆರೋಗ್ಯ ಕಾಪಾಡುವ ನಿಟ್ಟಿನಲ್ಲಿ ಪ್ರಮುಖ ವರ್ಗವಾಗಿ ದುಡಿಯುತ್ತಿದ್ದಾರೆ. ದೇಶದಲ್ಲಿ 2020ರ ಮಾರ್ಚ್ ತಿಂಗಳ ಹೊತ್ತಿಗೆ ಕೋವಿಡ್‌ನಿಂದ ಅನೇಕ ಸಾವು ನೋವುಗಳನ್ನು ಕಂಡು ಲಾಕ್‌ಡೌನ್ ಮಾಡಲಾಯಿತು.ಇಡೀ ದೇಶವೇ ಸ್ತಬ್ಧವಾಗಿ ಸೋಂಕು ಹರಡುವ ಭೀತಿಯಿಂದ ಯಾರು ಹೊರಗಡೆ ಓಡಾಡುತ್ತಿರಲಿಲ್ಲ. ಎಲ್ಲರೂ ತಮ್ಮ ತಮ್ಮ ಮನೆಗಳಲ್ಲಿ ಇದ್ದರು. ಇಂತಹ ಕಠಿಣ ಪರಿಸ್ಥಿತಿಯಲ್ಲೂ ಪೌರಕಾರ್ಮಿಕರು ಜಗ್ಗದೆ ಬಸವಣ್ಣನವರ ವಚನದಂತೆ 'ಕಾಯಕವೇ ಕೈಲಾಸ' ಎಂಬಂತೆ ತಮ್ಮ ಕೆಲಸವನ್ನು ಪ್ರಾಮಾಣಿಕವಾಗಿ ಪ್ರತಿನಿತ್ಯ ನಿರ್ವಹಿಸಿದ್ದಾರೆ. ಸಮುದಾಯದ ಆರೋಗ್ಯಕ್ಕಾಗಿ ತಮ್ಮ ಜೀವನವನ್ನು ಮುಡುಪಾಗಿಟ್ಟಿರುವ ಪೌರಕಾರ್ಮಿಕರ ಸ್ಥಿತಿ ಹೇಳತೀರದು. ಮನೆಯಲ್ಲಿ ಕಡುಬಡತನ ಕಡಿಮೆ ಸಂಬಳಕ್ಕಾಗಿ ದುಡಿಯುತ್ತಿದ್ದಾರೆ. ಕೋವಿಡ್ ಸೋಂಕು ಉಂಡುಮಾಡಿದ ಭಯದ ಭೀತಿ ನಡುವೆ ದೇಶದ ಸ್ವಚ್ಛತೆಯನ್ನು ನಿರ್ವಹಿಸಿದ್ದಾರೆ. ಪೌರಕಾರ್ಮಿಕರು ಮನೆಮನೆಗಳಿಗೆ ತೆರಳಿ ಸಂಗ್ರಹಿಸಿಟ್ಟ ಕಸವನ್ನು ವಿಲೇವಾರಿ ಮಾಡಬೇಕಿತ್ತು. ಈ ಸಮಯದಲ್ಲಿ ಯಾವ ಮನೆಯಲ್ಲಿ ಕೋವಿಡ್ ಸೋಂಕು ಬಂದಿದೆ ಎಂಬುದು ಗೊತ್ತಾಗುತ್ತಿರಲಿಲ್ಲ. ಆ ಸಂದರ್ಭದಲ್ಲಿ ಇವರಿಗೂ ವೈರಸ್ ತಗಲುವ ಅವಕಾಶ ಹೆಚ್ಚಾಗಿರುತ್ತದೆ. ಜನರು ಬಳಸಿದ ಮಾಸ್ಕ್, ಸ್ಯಾನಿಟೈಜರ್ ಬಾಟಲ್, ಗ್ಲೌಸ್‌ಗಳನ್ನು ಎಲ್ಲೆಂದರಲ್ಲಿ ಬಿಸಾಡುತ್ತಿದ್ದರು. ಇವುಗಳನ್ನು ಎತ್ತಿ ಹಾಕಬೇಕಾಗಿತ್ತು. ಇವುಗಳಿಂದ ವೈರಸ್ ನಮಗೂ ಹರಡಬಹುದೆಂಬ ಭೀತಿಯಿಂದ ಕಾರ್ಯನಿರ್ವಹಿಸಿದ್ದಾರೆ. ಕೆಲಸ ಮುಗಿಸಿ ಮನೆಗೆ ಹೋದರೆ ಎಲ್ಲಿ ತಮ್ಮ ಕುಟುಂಬದ ಸದಸ್ಯರಿಗೂ ವೈರಸ್ ಬಂದುಬಿಡುತ್ತದೆಯೋ ಎಂಬ ಸಂದಿಗ್ಧ ಪರಿಸ್ಥಿತಿಯಲ್ಲಿ ಕೋವಿಡ್ ವಿರುದ್ಧ ಹೋರಾಟದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ.

ಜಗತ್ತನ್ನು ಕೋವಿಡ್–19 ವೈರಸ್ ಕಾಡಿದೆ. ವೈರಸ್ ಅನ್ನು ನಿಯಂತ್ರಿಸಲು ಶ್ರಮಿಸಿದ ಕೋವಿಡ್ ವಾರಿಯರ್ಸ್, ಮುಂಚೂಣಿಯ ಕಾರ್ಯಕರ್ತರು ಮತ್ತು ವೈರಸ್ ವಿರುದ್ಧದ ಹೋರಾಟದಲ್ಲಿ ಮರಣ ಹೊಂದಿದವರ ಗೌರವಾರ್ಥ ಅನೇಕ ದೇಶಗಳು ಅಂಚೆ ಚೀಟಿಗಳನ್ನು ಬಿಡುಗಡೆ ಮಾಡಿವೆ.

**ಭಾರತ**

ಭಾರತವು ಡಿಸೆಂಬರ್ 24, 2020 ರಂದು ಕೋವಿಡ್ ವಾರಿಯರ್ಸ್‌ಗಳಿಗೆ ಗೌರವ ಪೂರ್ವಾರ್ಕವಾಗಿ 4



ಅಂಚೆಚೀಟಿಗಳನ್ನು ಬಿಡುಗಡೆ ಮಾಡಿದೆ. 'ಕೋವಿಡ್–19 ಯೋಧರಿಗೆ ನಮಸ್ಕಾರ' ಎಂಬ ಶೀರ್ಷಿಕೆಯೊಂದಿಗೆ ಬಿಡುಗಡೆ ಮಾಡಲಾಗಿದೆ.ಇದರ ಬೆಲೆಯು 10 ರೂಪಾಯಿಗಳನ್ನು ಹೊಂದಿದೆ. ಅಂಚೆ ಚೀಟಿಯಲ್ಲಿ ಕೋವಿಡ್–19 ಸಾಂಕ್ರಾಮಿಕ ವೈರಸ್ ಅನ್ನು ತಡೆಗಟ್ಟುವ ಹೋರಾಟದಲ್ಲಿ ಶ್ರಮಿಸಿದ ವೈದ್ಯರು, ಭೂ, ವಾಯು, ನೈರ್ಮಲ್ಯ ಕಾರ್ಯಕರ್ತರು, ಅಂಚೆ ನೌಕರರು, ಆಂಬುಲೆನ್ಸ್ ಚಾಲಕರು, ಆಶಾಕಾರ್ಯಕರ್ತರು, ನರ್ಸ್‌ಗಳನ್ನು ಒಳಗೊಂಡ ಎಲ್ಲಾ ಕೋವಿಡ್ ವಾರಿಯರ್ಸ್‌ಗಳಿಗೆ ಗೌರವ ಸೂಚಿಸಲಾಗಿದೆ.

**ಶ್ರೀಲಂಕಾ**



ನವೆಂಬರ್ 22, 2020 ರಂದು ಕೋವಿಡ್–19 ಕುರಿತ ಅಂಚೆಚೀಟಿಯನ್ನು ಶ್ರೀಲಂಕಾ ದೇಶವು ಬಿಡುಗಡೆ ಮಾಡಿದೆ. ಶ್ರೀಲಂಕಾ 'ಕೋವಿಡ್–19 ವೈರಸ್ ವಿರುದ್ಧ ಹೋರಾಡಲು ಎದ್ದೇಳಿ' ಎಂಬ ಶೀರ್ಷಿಕೆಯನ್ನು ಹೊಂದಿದೆ. ಇದರ ಬೆಲೆ 15 ಶ್ರೀಲಂಕಾ ರೂಪಾಯಿಗಳಾಗಿವೆ.

**ಚೀನಾ**

ಕೋವಿಡ್ ನಿಯಂತ್ರಿಸುವ ಮುಂಚೂಣಿಯಲ್ಲಿ ಹೋರಾಡುತ್ತಿರುವ ಸೇನಾನಿಗಳು ಮತ್ತು ಸೋಂಕಿಗೆ



ಬಲಿಯಾದವರ ಗೌರವಾರ್ಥ ಎರಡು 130 ಯೆನ್ ಬೆಲೆಯ ಅಂಚೆಚೀಟಿಯನ್ನು ಚೀನಾ ದೇಶವು ಮೇ, 2020ರಲ್ಲಿ ಬಿಡುಗಡೆ ಮಾಡಿದೆ.ಇದರಲ್ಲಿ ಆರೋಗ್ಯ, ರಕ್ಷಣಾ ಕಾರ್ಯಕರ್ತರು, ಯೋಧರು ಮತ್ತು ಪೊಲೀಸರು, ರಕ್ಷಣಾ ಉಡುಪುಗಳನ್ನು ಧರಿಸಿ ವೈರಸ್ ವಿರುದ್ಧ ಹೋರಾಡುತ್ತಿರುವುದನ್ನು ತೋರಿಸುತ್ತದೆ.

**ಇರಾನ್**

2020ರ ಮಾರ್ಚ್ 17 ರಂದು ಇರಾನ್ ದೇಶವು ಕೋವಿಡ್–19 ವಿರುದ್ಧ ಹೋರಾಡಿದ ವಾರಿಯರ್ಸ್‌ಗಳ



ನೆನಪಿನಾರ್ಥ ಬಿಡುಗಡೆ ಮಾಡಿದೆ. 18000 ರಿಯಾಲ್‌ಗಳ ಅಂಚೆಚೀಟಿಯನ್ನು ಅನಾವರಣಗೊಳಿಸಿತು. ಈ ಅಂಚೆಚೀಟಿಯು 'ಕೊರೋನಾ ವೈರಸ್ ದಾಳಿಕೋರರು' ಎಂಬ ಶೀರ್ಷಿಕೆಯನ್ನು ಹೊಂದಿದೆ. ಸಾರ್ವಜನಿಕ ವಿಕ್ಟರಿ ಚಿಹ್ನೆಯಲ್ಲಿ ಎಡಗೈಯನ್ನು ಮೇಲಕ್ಕೆತ್ತಿ ಹಿಡಿದಿದ್ದಾರೆ, ಇತರ ವ್ಯಕ್ತಿಗಳು ಗ್ಲೌಸ್, ಮಾಸ್ಕ್‌ನಲ್ಲಿ ಮತ್ತು ಹಜ್ಮತ್ ಸೂಟ್‌ಗಳನ್ನು ವಿಕ್ಟರಿ ಸಂಕೇತವನ್ನು ತೋರಿಸಲಾಗಿದೆ. ರಾಷ್ಟ್ರೀಯ ವೀರರು ಎಂಬ ಪದಗಳನ್ನು ಬಳಸಲಾಗಿದೆ.

**ಉಕ್ರೇನ್**




ಕೋವಿಡ್ ವಿರುದ್ಧ ಮುಂಚೂಣಿಯ ಹೋರಾಟದಲ್ಲಿರುವ ಮಾಸ್ಕ್ ಧರಿಸಿರುವ ವೈದ್ಯಕೀಯ ಕಾರ್ಯಕರ್ತರ ಚಿತ್ರವನ್ನು ಉಕ್ರೇನ್ ದೇಶವು 2020ರಲ್ಲಿ ಬಿಡುಗಡೆ ಮಾಡಿದೆ.

**ಮಾರೆಕ್ಕೊ**

ಮರೆಕ್ಕೊ ದೇಸವು ಕೋವಿಡ್–19 ಮುಂಚೂಣಿಯ ಕಾರ್ಯಕರ್ತರನ್ನು ಗೌರವಿಸುವಲ್ಲಿ ಅಂಚೆ



ಚೀಟಿಯನ್ನು ತಂದಿದೆ. ಈ ಅಂಚೆ ಚೀಟಿಯಲ್ಲಿ ಮೊರಕ್ಕೊ ರಾಷ್ಟ್ರದ ನಕ್ಷೆ, ವೈದ್ಯಕೀಯ ಸಿಬ್ಬಂದಿ, ಪೊಲೀಸ್ ಅಧಿಕಾರಿಗಳು, ಅಂಚೆ ವಾಹಕರು ಸೇರಿದಂತೆ ಮುಂಚೂಣಿಯ ಕಾರ್ಯಕರ್ತರನ್ನು ಒಳಗೊಂಡಿದೆ.

**ವಿಯಾಟ್ನಾಂ**

ಕೋವಿಡ್ ಸಾಂಕ್ರಾಮಿಕ ರೋಗದ ವಿರುದ್ಧ ಹೋರಾಡುತ್ತಿರುವವರನ್ನು ಹುರಿದುಂಬಿಸಲು ವಿಯೆಟ್ನಾಂ




ದೇಶವು ಮಾರ್ಚ್ 31, 2020 ರಂದು 2 ಅಂಚೆ ಚೀಟಿಗಳನ್ನು ಬಿಡುಗಡೆ ಮಾಡಿದೆ. 4000 ಡಾಂಗ್‌ಗಳ (ಜಯ) ಬೆಲೆಯ ಒಂದು ಅಂಚೆಚೀಟಿ, ಸಾಂಕ್ರಾಮಿಕ ರೋಗದ ವಿರುದ್ಧದ ಹೋರಾಟದಲ್ಲಿ ವೈದ್ಯರು, ಸೇನಾ ಸಿಬ್ಬಂದಿ ಮತ್ತು ಪೊಲೀಸರನ್ನು ಗ್ರಾಫಿಕ್ ಶೈಲಿಯಲ್ಲಿ ಚಿತ್ರಿಸಲಾಗಿದೆ. 15000 ಡಾಂಗ್‌ಗಳ ಮೌಲ್ಯದ ಇನ್ನೊಂದು ಅಂಚೆಚೀಟಿ ಕೋವಿಡ್ ವೈರಸ್ ವಿರೋಧಿ ಚಿಕಿತ್ಸೆಯನ್ನು ಸಂಶೋಧಿಸುತ್ತಿರುವ ವೈದ್ಯರ ಚಿತ್ರಗಳೊಂದಿಗೆ ವಿನ್ಯಾಸಗೊಳಿಸಲಾಗಿದೆ.

**ಬ್ರೆಜಿಲ್**




ಬ್ರೆಜಿಲ್ ದೇಶವು ಜುಲೈ 08, 2020 ರಂದು ಕೋವಿಡ್ ತಡೆಗಟ್ಟಲು ಶ್ರಮಿಸಿದ ಸೇನಾನಿಗಳಿಗೆ ಗೌರವ ಸೂಚಕವಾಗಿ ಅಂಚೆ ಚೀಟಿಯನ್ನು ಬಿಡುಗಡೆ ಮಾಡಿದೆ. ಅಂಚೆಚೀಟಿಯ ಬೆಲೆಯು 25 ಬ್ರೆಜಿಲ್ ರಿಯಲ್ ಆಗಿವೆ.

ಒಟ್ಟಾರೆಯಾಗಿ ಕೋವಿಡ್–19 ಸೃಷ್ಟಿಸಿದ ಸಂಕಷ್ಟವನ್ನು ನಿಭಾಯಿಸಲು ತಮ್ಮ ಜೀವನವನ್ನೇ ಪಣಕ್ಕಿಟ್ಟು ನಿಸ್ವಾರ್ಥ ಭಾವನೆಯಿಂದ ಸೇವೆ ಸಲ್ಲಿಸಿದ ಕೋವಿಡ್ ವಾರಿಯರ್ಸ್‌ಗಳನ್ನು ನೆನೆಯುವುದು ಅಗತ್ಯವಾಗಿದೆ.

**ಪರಾಮರ್ಶನ ಗ್ರಂಥಗಳು**


- ಚಂದ್ರಶೇಖರ್, ಸಿ.ಆರ್. (2021). *ಕೋವಿಡ್–19 ಅಂಜಲೇಕೆ? ಅಳುಕಲೇಕೆ? ಹೋರಾಡಿ ಜಯಿಸೋಣ.* ಸಪ್ನ ಬುಕ್ ಹೌಸ್
- ಚಂದ್ರ ಪೂಜಾರಿ, ಎಂ. (2021). *ಲಾಕ್ ಡೌನ್.* ಕಂದೀಲು ಪ್ರಕಾಶನ.

- ಚಲುವರಾಜು ಹೆಚ್.ಎಲ್. (2021). *ಕೋರೋನಾ ವೈರಸ್ (ಕೋವಿಡ್–19).* ಹಂಗಳ ಪಾರ್ವತಮ್ಮ ಮತ್ತು ಲಕ್ಷ್ಮಣ ಚಾರಿಟಬಲ್ ಟ್ರಸ್ಟ್.
- ಲಕ್ಷ್ಮೀನಾರಾಯಣ, ಕೆ. (2021). *ಕೋವಿಡ್ ಮಾನವ ಸೃಷ್ಟಿಯೇ? (ಇದು ಭಾರತದ ಕೋವಿಡ್ ಸಮರದ ಕಥೆ).* ಪುಷ್ಪಾ ಎಂಟರ್ ಪ್ರೈಸಸ್.
- ಮಹಾಲಿಂಗು ಕಲ್ಕುಂದ, ಕೆ.ಪಿ. (2022). *ಕೊರೊನಾ ತಲ್ಲಣ (ಕೊರೊನಾ ಕಾಲದ ವಾಸ್ತವಿಕ ಚಿತ್ರಣ).* ಚಳುವಳಿ ಪ್ರಕಾಶನ.